ಸೀದಾ ಒಳಬಂದಳು. ದಾಳಿಕೋರರ ಹಾಗೆ ಮುಖ ಗಂಟಿಕ್ಕಿಕೊಂಡು ಮನೆಯ ಇಂಚಿಂಚನ್ನು ಅಪ್ರತ್ಯಕ್ಷವಾಗಿ ಹುಡುಕಿದಳು. ಏನಾದರೂ ಸುಳಿವು ಸಿಗಬಹುದೆಂದು! ಇಲ್ಲ, ಏನೂ ಇರಲಿಲ್ಲ. ಸುಳಿವುಗಳನ್ನು ಉಳಿಸುವ ಹಂತವನ್ನು ಮೀರಿದ ಎಚ್ಚರಿಕೆ ನಮ್ಮಲ್ಲಾಗಲೇ ಬಂದಾಗಿತ್ತು.

ನನ್ನ ಮಲಗುವ ಕೋಣೆಯಲ್ಲಿ ಮಂಚದ ಮೇಲೆ ಚಕ್ಕಳ ಮಕ್ಕಳ ಕೂತು ಹರಟತೊಡಗಿದವಳು "ಫಿಲೋಮಿನಾ... ನನಗೊಂದು ಕಪ್ ಟೀ ಬೇಕಿತ್ತು" ಅಂದಳು. ನಾನು "ನಡೀ ಅಲ್ಲೇ ಹರಟೆ ಹೊಡೀತಾ ಟೀ ಮಾಡಿ ಕುಡ್ಯೋಣ'' ಅಂದೆ. "ಬೇಡ, ನಾನೀ ಮ್ಯಾಗಜೈನ್ ಓದ್ತಿರತೀನಿ ನೀನು ತಗೊಂಬಾ" ಅಂದಳು. ನಾನು ನಿರಾಳವಾಗಿ ಎದ್ದು ಹೋದೆ. ನಾನು ಬರುವಷ್ಟರಲ್ಲಿ ತೆರೆದ ನನ್ನ ವಾರ್ಡ್‌ರೋಬಿನ ಒಂದು ಅರೆಯಲ್ಲಿದ್ದ ಮಡಿಚಿಟ್ಟ ತೀರಾ ಖಾಸಗಿಯಾದ ತುಂಬಾ ಆಧುನಿಕವಾದ ನನ್ನ ಒಳ ಉಡುಪನ್ನು ತೆಗೆದು ಕೈಯಲ್ಲಿಟ್ಟುಕೊಂಡು ತಲೆಗೆ ಹುಳಬಿಟ್ಟುಕೊಂಡು ಕೂತಿದ್ದಳು. ನಾನು "ಟೀ" ಎನ್ನುವಷ್ಟರಲ್ಲಿ "ಇದು ಎಲ್ಲಿ ತಗೊಂಡೆ? ನನ್ನತ್ರಾನೂ ಇದೇ ತರದ್ದು ಇದೆ" ಎಂದಳು. ಅಪಾಯದ ಗಂಟೆ ಹತ್ತಿರದಲ್ಲೇ ಕೇಳತೊಡಗಿತು.

"ಇದಾ... ನಾನೀಸರಿ ಬಾಸ್ ಜೊತೆ ಜಪಾನ್‌ಗೆ ಹೋಗಿದ್ದೆನಲ್ಲ. ಹದಿನೈದು ದಿನ ಅಲ್ಲಿದ್ದೆವಲ್ಲ. ಒಂದು ದಿನ ಸಂಜೆ ನಮ್ಮ ಇಡೀ ಟೀಮ್ ಶಾಪಿಂಗಿಗೆ ಹೋಗಿತ್ತು. ನಾನು ಇಂಥದ್ದನ್ನೆಲ್ಲ ಖರೀದಿಸಲು ಒಂದು ಅಂಗಡಿ ಹೊಕ್ಕಿದ್ದೆ. ಬಾಸ್ ನನ್ನ ಹಿಂದೆಯೇ ಬಂದು, "ಇಲ್ಲಿ ಏನಾದರೂ ಚೆನ್ನಾಗಿ ಕಂಡರೆ ಅರೂಗೆ ಕೊಂಡುಕೋ ಆಮೇಲೆ ಕೊಡುತ್ತೇನೆ" ಎಂದರು. ಇದು ಚೆಂದಗಾಣಿಸಿತು. ನನ್ನ ಜೊತೆ ನಿನಗೂ ತಗೊಂಡೆ. ಬಾಸ್ ಆಮೇಲೆ ದುಡ್ಡು ಕೊಟ್ಟರು" ಎಂದೆ. ನಂಬಿಕೆ ಅಪನಂಬಿಕೆಗಳ ನಡುವೆ ಹೊಯ್ದಾಡಿದ ಅವಳ ಕಣ್ಣುಗಳು ತಕ್ಷಣ ಒಪ್ಪಿಕೊಂಡುಬಿಟ್ಟವು. ನಾನಾದರೂ ಯಾಕೀ ಸುಳ್ಳನ್ನು ಹೇಳಿದೆನೆಂದು ನನಗೇ ಆಶ್ಚರ್ಯವಾಯಿತು. ಅವಳು ಎದ್ದು ಹೋದ ತಕ್ಷಣ ರಂಗನ್‌ಗೆ ಫೋನಾಯಿಸಿ ಎಲ್ಲವನ್ನು ವಿವರಿಸಿದ್ದೆ. ಯಾವುದೇ ವಿಷಯವನ್ನು ಒಂದಾಗಿ ನಿಭಾಯಿಸಬೇಕಾದಾಗ ಒಂದಿಷ್ಟು ಪಾರಸ್ಪರಿಕ ಅರಿವು, ಮಾಹಿತಿ ಹಂಚಿಕೆ ಬೇಕೆಂಬ ತತ್ವವನ್ನು ನಾನು ಮ್ಯಾನೇಜ್‌ಮೆಂಟ್ ಕೋರ್ಸಿನಲ್ಲಿದ್ದಾಗಲೇ ಕಲಿತಿದ್ದೆ. ಒಂದು ಸಾರಿ ಮಾತ್ರ... ನನ್ನಂತಹ ನಾನೂ ಅಲ್ಲಾಡಿ ಹೋಗುವಂತಹ ಸನ್ನಿವೇಶವೊಂದು ಎದುರಾಗಿ ಬಿಟ್ಟಿತ್ತು. ಅದೇ ತಾನೆ ಚೆನ್ನೈನಲ್ಲಿ ಒಂದು ಕಾನ್ಫರೆನ್ಸ್‌ಗೆ ಆಫೀಸಿನಿಂದ ಆರು ಜನ ಹೋಗಬೇಕಿತ್ತು. ರಂಗನ್ ಅಲ್ಲಿ ಪೇಪರ್ ಪ್ರೆಸೆಂಟ್ ಮಾಡಬೇಕಿತ್ತು. ಎರಡು ದಿನದ ಕಾರ್ಯಕ್ರಮ ಮಾತ್ರ. ರಂಗನ್ ಇನ್ನೂ ಎರಡು ದಿನ ಮುಂದು ಹಾಕಿದ್ದ; ಮಹಾಬಲಿಪುರಂನ ರೆಸಾರ್ಟ್‌ನಲ್ಲಿ ಕಾಟೇಜ್ ಕಾಯ್ದಿರಿಸಿದ್ದ. ಇಡೀ ಕಡಲು, ಆಕಾಶ, ಗಾಳಿ ಎಲ್ಲವೂ ನಮ್ಮದೇ ಎನ್ನುವಂತೆ ತಿರುಗಿದ್ದೆವು.

ಊರಿಗೆ ಬಂದ ಎರಡನೇ ದಿನ... ರಂಗನ್ ಫೋನ್ ಹಚ್ಚಿದ. "ಫಿಲೋ, ಅರು ತುಂಬಾನೆ ಅಪ್ಸೆಟ್ ಆಗಿದ್ದಾಳೆ. ಯಾರೋ ಮಹಾಬಲಿಪುರದಲ್ಲಿ ನಮ್ಮಿಬ್ಬರನ್ನು ನೋಡಿ ಸುದ್ದಿ ಮುಟ್ಟಿಸಿದ್ದಾರೆ. ನಾವು ಹೋಗೆ ಇರಲಿಲ್ಲ ಅನ್ನಲಾಗುವುದಿಲ್ಲ. ಏನು ಮಾಡೋದಂತ ಗೊತ್ತಾಗ್ತಿಲ್ಲ. ಅವಳು ಯಾವುದೇ ಗಳಿಗೆಯಲ್ಲಿ ನಿನ್ನನ್ನೂ ಅಟ್ಯಾಕ್ ಮಾಡಬಹುದು. ನಾವು ಹೊಗಿದ್ದೆವು ಅಂತ ಒಪ್ಪಿಕೊಂಡುಬಿಟ್ಟಿದೀನಿ. ಇಬ್ಬರೇ ಅಲ್ಲ, ಇನ್ನು ಇಬ್ಬರು ಫಿಲೋನ ಗೆಳತಿಯರೂ ಬಂದಿದ್ದರು ಅಂತ ಅಂದಿದ್ದೀನಿ. ಹೇಗಾದರೂ ಮ್ಯಾನೇಜ್ ಮಾಡು ಪ್ಲೀಸ್" ಅಂದ. ಕುಸುಮಳಿಗೆ ಫೋನ್ ಹಚ್ಚಿದೆ. ಅವಳಿಗೆ ನನ್ನ ಕುರಿತು ಗೊತ್ತಿಲ್ಲದ್ದು ಏನೂ ಇರಲಿಲ್ಲ.